RNU AIR DHARWAD

NOVEMBER 09, 2024

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಮೈಸೂರಿನಲ್ಲಿ, ವಿಶ್ವದ ಮೊದಲ ವಿಶೇಷ ತಾರಾಲಯ, 2025ರ ಸೆಪ್ಟೆಂಬರ್‌ನಲ್ಲಿ ಕಾರ್ಯಾರಂಭ – ನಿರ್ಮಲಾ ಸೀತಾರಾಮನ್.
- ರಾಯಚೂರು ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ, ವಿನೂತನ 'ಇ–ಸ್ಯಾಪ್' ಅಪ್ಲಿಕೇಶನ್'ಗೆ, ರೈತರಿಂದ ಉತ್ತಮ ಸ್ಪಂದನೆ.
- ರಾಷ್ಟ್ರಕವಿ ಕುವೆಂಪು ಅವರ ಮೈಸೂರು ನಿವಾಸ, 'ಉದಯರವಿ'ಯನ್ನು, ಸ್ಮಾರಕವಾಗಿಸಿ – ಆರ್.ಅಶೋಕ, ಮುಖ್ಯಮಂತ್ರಿ ಅವರಿಗೆ, ಮನವಿ.
- 'ನ್ಯಾಯದ ಸಬಲೀಕರಣ; ಎಲ್ಲರಿಗೂ ಕಾನೂನು ನೆರವು' ಧ್ಯೇಯದೊಂದಿಗೆ, ಇಂದು, ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ವಿಶ್ವದ ಮೊದಲ ವಿಶೇಷ ಎಲ್.ಇ.ಡಿ. ಬಾಗಿದ ಗುಮ್ಮಟವುಳ್ಳ ತಾರಾಲಯ, ಮೈಸೂರಿನಲ್ಲಿ 2025ರ ಸೆಪ್ಟೆಂಬರ್‌ನಲ್ಲಿ ಕಾರ್ಯಾರಂಭಿಸಲಿದೆ ಎಂದು, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಮೈಸೂರಿನ ತಾವರೆಕಟ್ಟೆ ಬಳಿ, ನಿರ್ಮಾಣ ಹಂತದಲ್ಲಿರುವ, 'ಕಾಸ್ಮೋಸ್ ಸೆಂಟರ್' ವೀಕ್ಷಿಸಿ, ಬಳಿಕ ಸುದ್ದಿಗಾರರೊಂದಿಗೆ, ಸಚಿವರು ಮಾತನಾಡಿದರು. ತಾರಾಲಯದಿಂದ, ಮೈಸೂರು ಮತ್ತು ಸುತ್ತಮುತ್ತಲಿನ ಖಗೋಳ ವಿಜ್ಞಾನದ ಶ್ರೀಮಂತ ಪರಂಪರೆ, ಉಪಕರಣ, ವಿಶೇಷವಾಗಿ ಕನ್ನಡದ ಹಸ್ತಪ್ರತಿಗಳ ಅಧ್ಯಯನಕ್ಕೆ, ಸಹಕಾರಿಯಾಗಲಿದೆ ಎಂದರು. ಕಾಸ್ಮೋಸ್ ಕೇಂದ್ರವನ್ನು, ಮೈಸೂರು ವಿಶ್ವವಿದ್ಯಾಲಯದಲ್ಲಿ, ಭಾರತೀಯ ಖಭೌತವಿಜ್ಞಾನ ಸಂಸ್ಥೆ ನಿರ್ಮಿಸುತ್ತಿದೆ. ವಿಶ್ವದ ಮೊದಲ ಎಲ್.ಇ.ಡಿ ಬಾಗಿದ ಗುಮ್ಮಟ ತಾರಾಲಯವನ್ನು ಒಳಗೊಂಡಿದೆ.

ಕಾಸ್ಮೋಸ್ ಕೇಂದ್ರ, ಶಿಕ್ಷಣ ಮತ್ತು ತರಬೇತಿಗಾಗಿ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡ ಕೇಂದ್ರವಾಗಲಿದೆ ಎಂದು, ಸಚಿವರಾದ ನಿರ್ಮಲಾ ಸೀತಾರಾಮನ್ ವಿವರಿಸಿದರು.

<><><>

ರಾಯಚೂರು ಕೃಷಿ ವಿಶ್ವವಿದ್ಯಾಲಯ, ವಿನೂತನ 'ಇ-ಸ್ಯಾಪ್ ಮೊಬೈಲ್ ಅಪ್ಲಿಕೇಶನ್' ಅನ್ನು ಅಭಿವೃದ್ಧಿಪಡಿಸಿದೆ. ಇಲೆಕ್ಟ್ರಾನಿಕ್ ಸೊಲುಷನ್ ಅಗೇನ್ಸ್ಟ್ ಅಗ್ರಿಕಲ್ಚರಲ್ ಪೆಸ್ಟ್ ಕಂಟ್ರೋಲ್, 'ಇ-ಸ್ಯಾಪ್' ಅಪ್ಲಿಕೇಶನ್ ಅನ್ನು, ರೈತರು ಕೃಷಿ ಸಂಬಂಧಿ ಚಟುವಟಿಕೆಗಳ ಮಾಹಿತಿ ಪಡೆಯಲು, ಸ್ಮಾರ್ಟ್ ಫೋನ್‌ಗಳ ಮೂಲಕ, ಬಳಸುತ್ತಿದ್ದಾರೆ. ವಿಜಯನಗರ ಜಿಲ್ಲೆಯ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಶರಣಪ್ಪ ಮುದಗಲ್, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಶರಣಪ್ಪ ಮುದಗಲ್ ಧ್ವನಿ 45 ಸೆಕೆಂದುಗಳು

<><><>

ಚಾಮರಾಜನಗರ ಮತ್ತು ದಕ್ಷಿಣಕನ್ನಡ ಜಿಲ್ಲೆಗಳ ಕಾಲೇಜುಗಳಲ್ಲಿ, ವಿದ್ಯಾರ್ಥಿನಿಯರಿಗೆ, ಉಚಿತ ಮುಟ್ಟಿನ ಕಪ್‌ಗಳನ್ನು ವಿತರಿಸಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾದ ಹಿನ್ನೆಲೆ, ಶೀಘ್ರದಲ್ಲೇ ಈ ಯೋಜನೆಯನ್ನು, ರಾಜ್ಯಾದ್ಯಂತ ವಿಸ್ತರಿಸಲಾಗುವುದು ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ, ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಸಚಿವರು, ಸ್ಯಾನಿಟರಿ ಪ್ಯಾಡ್‌ಗಳ ಬದಲು, ಹೆಣ್ಣುಮಕ್ಕಳು ಮುಟ್ಟಿನ ಕಪ್ ಬಳಸುವುದು ಆರೋಗ್ಯಕರ. ಮುಟ್ಟಿನ ಕಪ್‌ಗಳು, ಆರ್ಥಿಕ ಹೊರೆ ಕಡಿಮೆ ಮಾಡಿ, ತ್ಯಾಜ್ಯ ವಿಲೇವಾರಿಯಿಂದ, ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು, ಸಾಧ್ಯವಾಗುತ್ತದೆ. ಹೆಣ್ಣು ಮಕ್ಕಳು ಹಿಂಜರಿಕೆ ಬಿಟ್ಟು, ಮುಟ್ಟಿನ ಕಪ್ ಬಳಕೆಗೆ ಮುಂದಾಗಬೇಕು ಎಂದು, ಮನವಿ ಮಾಡಿದ್ದಾರೆ.

<><><>

ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ, ಆರೋಗ್ಯಾಕಾಂಕ್ಷಿಗಳಿಗೆ ಶೇಕಡ 70 ರಿಂದ 80 ರಷ್ಟು ಔಷಧಿಗಳು, ವಿತರಣೆಗೆ ಲಭ್ಯವಾಗುವಂತೆ, ಕ್ರಮ ಕೈಗೊಳ್ಳಲಾಗಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ವಿಷಯ ತಿಳಿಸಿರುವ ಸಚಿವರು, ಅಗತ್ಯ ಔಷಧಿಗಳ ಪಟ್ಟಿಯನ್ನು, ಹಿಂದಿಗಿಂತ ನಾಲ್ಕುಪಟ್ಟು ಹೆಚ್ಚಿಸಿದ್ದು, ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ಲಭ್ಯವಾಗುವಂತೆ ಯೋಜಿಸಲಾಗಿದೆ ಎಂದು, ಪ್ರಕಟಿಸಿದ್ದಾರೆ. 'ಗೃಹ ಆರೋಗ್ಯ ಯೋಜನೆ' ಮೂಲಕ, ಮಧುಮೇಹ ಮತ್ತು ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವವರ ಮನೆ ಬಾಗಿಲಿಗೆ, ಔಷಧಿ ಸರಬರಾಜು ಮಾಡಲಾಗುತ್ತಿದೆ. ಮಧುಮೇಹ ಮತ್ತು ಯೋಗಕ್ಷೇಮ ಧ್ಯೇಯವಾಗಿದೆ ಎಂದು, ಸಚಿವರು ಹೇಳಿದ್ದಾರೆ.

<><><>

ರಾಜ್ಯದ ವಿವಿಧ ಅಕಾದೆಮಿಗಳು ಹಾಗೂ ಪ್ರಾಧಿಕಾರಗಳ ಸಹಯೋಗದಲ್ಲಿ, ಕರ್ನಾಟಕ ಸುವರ್ಣ ಸಂಭ್ರಮ-50, ಕೊನೆಯ ಹಾಗೂ ನಾಲ್ಕನೆಯ ಕಾರ್ಯಕ್ರಮ, ಬರುವ 20 ಮತ್ತು 21 ರಂದು, ಮಂಗಳೂರಿನ ಪುರಭವನದಲ್ಲಿ ನಡೆಯಲಿದೆ ಎಂದು, ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾದೆಮಿ ಅಧ್ಯಕ್ಷ ಸದಾನಂದ ಮಾವಜಿ ತಿಳಿಸಿದ್ದಾರೆ. ಮಡಿಕೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಅರೆಭಾಷೆ, ಕೊಡವ, ತುಳು, ಕೊಂಕಣಿ, ಬ್ಯಾರಿ ಹಾಗೂ ಯಕ್ಷಗಾನ ಅಕಾದೆಮಿಗಳ ನೇತೃತ್ವದಲ್ಲಿ, ಕಾರ್ಯಕ್ರಮ ಆಯೋಜಿತವಾಗಿದೆ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮೈಸೂರಿನ ಜಯಲಕ್ಷ್ಮೀ ಪುರಂನಲ್ಲಿರುವ, ರಾಷ್ಟ್ರಕವಿ ಕುವೆಂಪು ಅವರ ನಿವಾಸ, 'ಉದಯರವಿ'ಯನ್ನು, ಸ್ಮಾರಕವಾಗಿಸಲು, ರಾಜ್ಯ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ಮನವಿ ಮಾಡಿದ್ದಾರೆ. ಕುವೆಂಪು ಅವರು ರಾಷ್ಟ್ರಕವಿ. ಇಡೀ ವಿಶ್ವಕ್ಕೆ ವಿಶ್ವ ಮಾನವ ಸಂದೇಶ ಕೊಟ್ಟ ರಸಋಷಿ. ಅಂತಹ ಶ್ರೇ ್ಠ ದಾರ್ಶನಿಕ ಬಾಳಿ ಬದುಕಿದ ಮನೆಯನ್ನು, ಸ್ಮಾರಕವಾಗಿಸಿ, ಕನ್ನಡದ ದೇಗುಲದಂತೆ ಕಾಪಾಡುವುದು, ಎಲ್ಲರ ಆದ್ಯ ಕರ್ತವ್ಯ ಎಂದಿದ್ದಾರೆ.

<><><>

'ನ್ಯಾಯದ ಸಬಲೀಕರಣ; ಎಲ್ಲರಿಗೂ ಕಾನೂನು ನೆರವು' ಎಂಬ ಧ್ಯೇಯದೊಂದಿಗೆ, ಇಂದು, ರಾಷ್ಟ್ರೀಯ ಕಾನೂನು ಸೇವೆಗಳ ದಿನವನ್ನು, ದೇಶಾದ್ಯಂತ ಆಚರಿಸಲಾಗುತ್ತಿದೆ. ಕಾನೂನಿನ ಬೆಂಬಲದ ನಿರ್ಣಾಯಕ ಅಗತ್ಯ ಮತ್ತು ಸಮಾಜವನ್ನು ನ್ಯಾಯಯುತವಾಗಿ ಬಲಪಡಿಸುವ, ಪಾತ್ರವನ್ನು ಈ ದಿನ ಸಾಕ್ಷೀಕರಿಸುತ್ತದೆ. ದೇಶದ ಎಲ್ಲ ನಾಗರಿಕರಿಗೆ, ವಿಶೇ ವಾಗಿ ತಳ ಸಮುದಾಯ ಮತ್ತು ಸಮಾಜದ ಅಂಚಿನಲ್ಲಿರುವ ಜನರಿಗೆ, ಕಾನೂನುಬದ್ಧ ಹಕ್ಕುಗಳು ಮತ್ತು ಸೇವೆಗಳ ಬಗ್ಗೆ ಜಾಗೃತಿ ಮೂಡಿಸುವ ದಿನವಾಗಿ, ಆಚರಿಸಲ್ಪಡುತ್ತದೆ.

<><><>

ಚಿಕ್ಕಮಗಳೂರು ಜಿಲ್ಲೆಯಲ್ಲಿ, 48 ಬಾಲ್ಯ ವಿವಾಹ ಸಂಬಂಧಿ ದೂರುಗಳು ದಾಖಲಾಗಿದ್ದು, 44 ಬಾಲ್ಯ ವಿವಾಹಗಳನ್ನು ತಡೆಯಲಾಗಿದೆ. 4 ಪ್ರಕರಣಗಳಲ್ಲಿ ಕಾನೂನು ಕ್ರಮ ಜರುಗಿಸಲಾಗಿದೆ ಎಂದು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷ ಹನುಮಂತಪ್ಪ ತಿಳಿಸಿದ್ದಾರೆ.

<><><>

ನ್ಯಾಯದ ಅಂತಿಮ ಗುರಿ ಸತ್ಯದ ಅನ್ವೇ ಣೆ. ವಿಧಿ ವಿಜ್ಞಾನ ಮತ್ತು ವಿಷೌಷಧಿ ತಜ್ಞತೆ, ನ್ಯಾಯದಾನ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ ಎಂದು, ಕಾನೂನು ಖಾತೆ ಸಚಿವ, ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಬೆಳಗಾವಿಯ ಜವಹರಲಾಲ ನೆಹರೂ ವೈದ್ಯಕೀಯ ಮಹಾವಿದ್ಯಾಲಯದ, ಫೋರೆನ್ಸಿಕ್ ಮೆಡಿಸಿನ್ ಹಾಗೂ ಟಾಕ್ಸಿಕಾಲಾಜಿ 'ಕೆಹೆರ್' ವಿಭಾಗ ಏರ್ಪಡಿಸಿದ್ದ, ಕರ್ನಾಟಕ ಮೆಡಿಕೋ ಲೀಗಲ್ ಸಂಸ್ಥೆಯ, 32ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಅವರು, ಮಾತನಾಡಿದರು. ಸಂಕೀರ್ಣ ಪ್ರಕರಣಗಳಲ್ಲಿ ನ್ಯಾಯಾಲಯಗಳು, ಸಂತ್ರಸ್ಥರಿಗೆ ನ್ಯಾಯ ಒದಗಿಸಲು, ವೈದ್ಯಕೀಯ ವೃತ್ತಿಪರರ ನೆರವು ಪಡೆಯುವುದು ಅಗತ್ಯವಾಗಿದೆ. 'ತಜ್ಞ ಸಾಕ್ಷ್ಯ'ವನ್ನು ಅವಲಂಬಿಸಿ, ಪುರಾವೆಯಾಗಿ ಸ್ವೀಕರಿಸಿ, ನಿಖರ ನಿರ್ಧಾರ ಕೈಗೊಳ್ಳಲು ಅನುವಾಗುತ್ತದೆ ಎಂದು, ಸಚಿವ ಪಾಟೀಲ ಅಭಿಪ್ರಾಯಪಟ್ಟರು.

<><><>

ಉತ್ತರಕನ್ನಡ ಜಿಲ್ಲೆ ಯಕ್ಷಶ್ರೀ ಪ್ರಥಮ ಪುರಸ್ಕಾರವನ್ನು, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶತಾವಧಾನಿ ಡಾ.ಆರ್.ಗಣೇಶ ಅವರಿಗೆ, ಮಂಗಳವಾರ 12ನೇ ತಾರೀಖು, ಹೊನ್ನಾವರದಲ್ಲಿ ಪ್ರದಾನ ಮಾಡಲಾಗುತ್ತಿದೆ.

ಖ್ಯಾತ ಯಕ್ಷಗಾನ ಕಲಾವಿದ, ಕೊಂಡದಕುಳಿ ರಾಮಚಂದ್ರ ಹೆಗಡೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿ, ಪ್ರಶಸ್ತಿ ಒಂದು ಲಕ್ಷ ರೂಪಾಯಿ ನಗದು ಹಾಗೂ ಬೆಳ್ಳಿ ಕಡಗ ಹೊಂದಿದೆ ಎಂದಿದ್ದಾರೆ.

<><><>

ಕೊಂಡದಕುಳಿ ರಾಮಚಂದ್ರ ಹೆಗಡೆ, ಧ್ವನಿ 35 ಸೆಕೆಂದುಗಳು

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕೋಲಾರದ  ವಿಶ್ವೇಶ್ವರಾಯ ಜಿಲ್ಲಾ ಕ್ರೀಡಾಂಗಣದಲ್ಲಿ, ಪ್ರೌಢ ಶಾಲಾ ವಿಭಾಗದ ರಾಜ್ಯ ಮಟ್ಟದ, ಮೂರು ದಿನಗಳ ಅಥ್ಲೆಟಿಕ್ಸ್ ಕ್ರೀಡಾಕೂಟಕ್ಕೆ, ವಿಧಾನ ಪರಿ ‍ತ್ ಸಭಾಪತಿ ಬಸವರಾಜ ಹೊರಟ್ಟಿ ಚಾಲನೆ ನೀಡಿದರು. ಜಿಲ್ಲಾಧಿಕಾರಿ ಅಕ್ರಂ ಪಾಷಾ ಮಾತನಾಡಿ, ರಾಜ್ಯದ 35 ಶೈಕ್ಷಣಿಕ ಜಿಲ್ಲೆಗಳಿಂದ, 4 ಸಾವಿರ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು, ಈ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದಾರೆ, ಎಂದರು.

<><><>

ಬೆಂಗಳೂರಿನ, ಇಂದಿರಾ ಗಾಂಧಿ ನ್ಯಾ ‍ನಲ್ ಸೆಂಟರ್ ಫಾರ್ ದಿ ಆರ್ಟ್ಸ್ ಹಾಗೂ ತ್ರಿಶೂರ್ ಪ್ರಾದೇಶಿಕ ಕೇಂದ್ರಗಳ ವತಿಯಿಂದ, ಇಂದು ಮತ್ತು ನಾಳೆ, ಎರಡು ದಿನಗಳ 'ಕಲಾ ಕಲರವ – 2024', ಬೆಂಗಳೂರಿನಲ್ಲಿ ಆಯೋಜಿತವಾಗಿದೆ. ಕರ್ನಾಟಕ ಮತ್ತು ಕೇರಳ ರಾಜ್ಯಗಳ, ಸಾಂಸ್ಕೃತಿಕ ಉತ್ಸವ ಬೆಳಗ್ಗೆ 10 ರಿಂದ ರಾತ್ರಿ 8ರ ವರೆಗೆ ಜರುಗಲಿದೆ. ಬೆಂಗಳೂರಿನ ಐ.ಜಿ.ಎನ್.ಸಿ.ಎ. ಪ್ರಾದೇಶಿಕ ನಿರ್ದೇಶಕ ಡಿ. ಮಹೇಂದ್ರ ಮತ್ತು ತ್ರಿಶೂರ್‌ನ ಪ್ರಾದೇಶಿಕ ನಿರ್ದೇಶಕ ಮಾನಸಿ ಪಾಂಡ್ಯ ರಘುನಂದನ್ ಉತ್ಸವದ ನೇತೃತ್ವ ವಹಿಸಿದ್ದಾರೆ.

<><><>

ಹಬ್ಬದ ಋತುವಿನಲ್ಲಿ ಭಾರತೀಯ ರೈಲ್ವೆ 4 ಸಾವಿರದ 521 ವಿಶೇಷ ರೈಲುಗಳ ಮೂಲಕ, 65 ಲಕ್ಷ ಪ್ರಯಾಣಿಕರ ಸುಗಮ ಪ್ರಯಾಣಕ್ಕೆ ನೆರವಾಗಿದೆ ಎಂದು, ರೈಲ್ವೆ ಇಲಾಖೆ ಪ್ರಕಟಣೆ ತಿಳಿಸಿದೆ.

<><><>

ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಮಿಕ ಇಲಾಖೆ, 2 ಸಾವಿರದ 569 ನಕಲಿ ಕಾರ್ಮಿಕರ ಗುರುತಿನ ಚೀಟಿಗಳನ್ನು ರದ್ದುಪಡಿಸಿದೆ ಎಂದು, ಕಾರ್ಮಿಕ ಅಧಿಕಾರಿ ಶಬಾನಾ ಆಜ್ಮಿ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮೈಸೂರಿನಲ್ಲಿ, ವಿಶ್ವದ ಮೊದಲ ವಿಶೇಷ ತಾರಾಲಯ, 2025ರ ಸೆಪ್ಟೆಂಬರ್‌ನಲ್ಲಿ ಕಾರ್ಯಾರಂಭ – ನಿರ್ಮಲಾ ಸೀತಾರಾಮನ್.
- ರಾಯಚೂರು ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ, ವಿನೂತನ 'ಇ–ಸ್ಯಾಪ್' ಅಪ್ಲಿಕೇಶನ್'ಗೆ, ರೈತರಿಂದ ಉತ್ತಮ ಸ್ಪಂದನೆ.

- ರಾಷ್ಟ್ರಕವಿ ಕುವೆಂಪು ಅವರ ಮೈಸೂರು ನಿವಾಸ, ‘ಉದಯರವಿ’ಯನ್ನು, ಸ್ಮಾರಕವಾಗಿಸಿ – ಆರ್.ಅಶೋಕ, ಮುಖ್ಯಮಂತ್ರಿ ಅವರಿಗೆ, ಮನವಿ.
- ‘ನ್ಯಾಯದ ಸಬಲೀಕರಣ; ಎಲ್ಲರಿಗೂ ಕಾನೂನು ನೆರವು’ ಧ್ಯೇಯದೊಂದಿಗೆ, ಇಂದು, ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ